O.S **15/2025**

P.W.1

ಸಾಕ್ಷಿಯನ್ನು ದಿಃ 23-06-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ ಶ್ರೀಮತಿ.ಯು.ವಿ.ಬಿ. ವಕೀಲರಿಂದ ವಾದಿ ಪರವಾಗಿ:-**

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ.

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು, ಅವುಗಳಲ್ಲಿ ದಿ.23.08.2016 ರ ಸಾಲದ ಅರ್ಜಿ, ಮಂಜೂರಾತಿ ಪತ್ರ, ಸಾಲದ ಒಪ್ಪಂದ ಪತ್ರ ಕ್ರಮವಾಗಿ ನಿಪಿ1 ರಿಂದ 3 ಎಂದು,ಅಡಮಾನು ಪತ್ರ ನಿಪಿ-4 ಎಂದು, ಸರ್ವೆ ನಂ. 379/3 , 228/3 ಗಳನ್ನು ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ-5 ಮತ್ತು 6 ಎಂದು, ಕಾನೂನು ಸೂಚನಾ ಪತ್ರವನ್ನು ನಿಪಿ-7 ಎಂದು, ಬಿನ್ ಜಾರಿಯಾದ ಅಂಚೆ ಲಕೋಟೆಯನ್ನು ಒಡೆದು ತೆಗೆದು ನೋಡಲಾಗಿ ಅದರಲ್ಲಿರುವ ಅಂಚೆ ಲಕೋಟೆಯನ್ನು ನಿಪಿ-8 ಎಂದು ಅದರಲ್ಲಿರೂ ಕಾನೂನು ಸೂಚನಾ ಪತ್ರವನ್ನು ನಿಪಿ-8-ಎ ಎಂದು, ಪ್ರತಿವಾದಿಯ ಖಾತೆಯ ಸ್ಟೇಟಮೆಂಟಿನ ಪ್ರತಿಯನ್ನು ನಿಪಿ.9 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಏಕಪಕ್ಷಿಯವಾದ ಕಾರಣ ಪಾಟೀ ಸವಾಲು ಇರುವುದಿಲ್ಲ.)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

sd/-23.06.2026
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ sd/-